## ಇಲ್ಲಿಯವರೆಗೆ



ಅಂಕೋಲೆಯ ದೇವಸ್ಥಾನದಲ್ಲಿ ಮಂಡಲಾಧೀಶನೊಬ್ಬನ ಆಳ್ವಿಕೆಗೆ ಒಳಪಟ್ಟ ಊರಿರು ಜಾಗದಲ್ಲಿದ್ದ ಪುರಾತನ ಶಿವ ದೇವಾಲಯಕ್ಕೆ ಬಹಳ ಮಹತ್ವವಿರುತ್ತದೆ. ಅಲ್ಲಿನ ದೇವಾಲಯದಲ್ಲಿ ನಿತ್ಯ ತ್ರಿಕಾಲಪೂಜೆ ನಡೆಯುತ್ತಿತ್ತು. ದೇವಾಲಯ ನೋಡಲೂ ಬಹಳ ಸುಂದರವಿತ್ತು. ಶ್ರಾವಣ ಮಾಸ ಹಾಗೂ ನವರಾತ್ರಿಗಳಲ್ಲಿ ಉತ್ಸವವೂ ನಡೆಯುತ್ತಿತ್ತು. ರಥೋತ್ಸವಕ್ಕೆ ನಾಡಿನ ಎಲ್ಲೆಡೆಯಿಂದ ಜನ ಬಂದು ಸೇರಿ ದೇವರ ದರ್ಶನ ಮಾಡಿ ಪುನೀತರಾಗುತ್ತಿದ್ದರು. ಇತ್ತ ಕಡೆ ಚಂದನಿಕಾ ಆತಂಕದಲ್ಲಿರುತ್ತಾಳೆ. ಯಾವುದೋ ಪೂರ್ವ ವೃತ್ತಾಂತವನ್ನು ಆನಂದ್‌ಗೆ ಹೇಳುತ್ತಾಳೆ. ಆಗ ಆನಂದ್ ಇದನ್ನೆಲ್ಲ ತನಗೆ ಏಕೆ ಈಗ ಹೇಳುತ್ತಿದ್ದಿಯಾ ಎನ್ನುತ್ತಾನೆ. ಸಂಬಂಧ ಇಷ್ಟವಿಲ್ಲದಿದ್ದರೆ ಹೇಳು ಎಂದು ಹೇಳುತ್ತಾ ನಿನಗಿಂತ ಬೇರೆ ಇನ್ನಾರು ನನಗೆ ಹುಡುಗಿ ಸಿಗೋದಿಲ್ಲ ಅನಿಸುತ್ತಿದೆ. ಈಗಲೇ ನಿನ್ನ ಮೇಲೆ ಆಸೆಯಾಗುತ್ತಿದೆ ಎಂಬ ಭಾವನಾತ್ಮಕ ಮಾತನ್ನು ಹೇಳುತ್ತಾನೆ. ಆಗ ಚಂದನಿಕಾ ಆನಂದ ಮೇಲೆ ಮೃದುವಾಗಿ ಗುದ್ದುತ್ತಾಳೆ. ದೇಶ್ವಂತರ ಮನೆಗೆ ಒಂದು ದಿನ ಬೆಳಿಗ್ಗೆ 'ಕನ್ಸರ್ವೇಶನ್ ಆಫ್ ಹ್ಯೂಮನ್ ಹೆರಿಟೇಜ್ ಅಂಡ್ ನೇಚರ್' ಒಂದು ಎನ್‌ಜಿಒ ಸಂಸ್ಥೆಯವರು ಬರುತ್ತಾರೆ. 'ಕಟ್ಟಡಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ ಅಂತ ಪತ್ರಿಕೆಗಳು ವರದಿ ಮಾಡತಿವೆ, ಅದು ನಿಜವೆ?' ಪ್ರಶ್ನಿಸಿದ. 'ಅದು ನಿಜ' ಉತ್ತರಿಸಿದ ಆನಂದ. 'ಇದನ್ನೀಗ ನೀವು ಕೆಡವಲು ಉದ್ದೇಶಿಸಿದ್ದೀರಿ ಅಂತ ಕೇಳಿದೆ…' ಸ್ವರದಲ್ಲಿ ಆರೋಪವಿತ್ತು. ಆನಂದ ತಾಳ್ಮೆ ಕಳೆದುಕೊಂಡ. 'ನಿಮಗಿದನ್ನು ಹೇಳಿದವರು ಯಾರು, ಮೊದಲು ಹೇಳಿ' ಅಂದ. ಮೊಮ್ಮಗನಿಗೆ ಸನ್ನೆಮಾಡಿದ ದೇಶ್ವಂತರು, ಶಾಮಸುಂದರನತ್ತ ತಿರುಗಿ 'ನಾವ್ಯಾವತ್ತು ಆ ವಿಚಾರ ಮಾತಾಡಿಲ್ಲ. ಆದ್ರೆ ಹೊರಗಿಂದ ಇಂತಾ ವದಂತಿ ಹೇಗೆ ಬರತಾ ಇದೆಯೊ ಗೊತ್ತಿಲ್ಲ. ನಿಮಗಿದು ಎಲ್ಲಿಂದ ಗೊತ್ತಾಯ್ತು ಅಂತ ಹೇಳಿದ್ರೆ ನಮಗೂ ಅನುಕೂಲ' ಎನ್ನುತ್ತಾರೆ ಸಮಾಧಾನದಿಂದ.

ಯಾವ ಮಾರ್ಗವೂ ಆದರ್ಶವಾದ್ದೇ ಅಂತ ನಂಬುತ್ತಾನೆ ಆತ. ಗಣನೀಯ ಪ್ರಮಾಣದ ಹಣವನ್ನು ಈ ವಾಮ ಮಾರ್ಗಕ್ಕಾಗಿಯೆ ತೆಗೆದಿರಿಸಲಾಗುತ್ತದೆ. ಈತನ ಸಮಯದಲ್ಲಿ ಉದ್ಯಮ 'ಆತಿಥ್ಯ' ಅಂದರೆ, ಹೋಟೆಲು ಕ್ಷೇತ್ರಕ್ಕೂ ತೆರೆದುಕೊಂಡಿತು. ಅವನ ಹೋಟೆಲುಗಳ ವೈಶಿಷ್ಟ್ಯವೆಂದರೆ ಜನರನ್ನಾಕರ್ಷಿಸುವ ಭಿನ್ನ ಪರಿಕಲ್ಪನೆ. ಇತರ ಹೋಟೆಲಂತಲ್ಲ. ಆ ಕಾರಣಕ್ಕೇ ಅವನು ನಿಮ್ಮ ಪುರಾತನ ಭವನವನ್ನು ತೆಗೆದುಕೊಂಡಿದ್ದು.'

'ತಡಿ ಚುಕ್ಕಿ, ಈ ಮನೆಯನ್ನು ನಾವು ಕೊಟ್ಟಿಲ್ಲ!…' ಪ್ರತಿಭಟಿಸಿದ ಆನಂದ.

ಮುಗುಳ್ನಕ್ಕಳು ಚುಕ್ಕಿ. 'ಆನಂದ, ಬಿಕಾನೇರಿ ಲೆಕ್ಕದಲ್ಲಿ ಇದನ್ನಾಗಲೇ ಅವನು ತಗೊಂಡಾಗಿದೆ. ಅವನು ಸಿಬ್ಬಂದಿಗೆ ಪದೆಪದೆ ಹೇಳೋ ಸ್ಲೋಗನ್ ಗೊತ್ತಾ? ಜೋ ಕೋಶಿಶ್‌ನ ರೋಕೇಗಾ ಉಸೆ ಕೋಈ ನ ರೋಕ ಸಕೇಗಾ. ಅಂದ್ರೆ– ಪ್ರಯತ್ನ ಮಾಡೋದು ಬಿಡದವನನ್ನು ತಡೆಯೋಕೆ ಯಾರಿಂದಲು ಆಗೋಲ್ಲ. ಅದವನ ರೀತಿ. ಕೇಳು, ಒಂದು ವರ್ಷ ಹಿಂದೆ, ಈ ಭವನದ ಫೋಟೊ ಹಾಕಿ ಪಾಟೀಲ ಲೇಖನ ಬರೆದನಲ್ಲ; ಆಗಲೆ ಯಾರೋ ಅವನ ಕಡೆಯೋರು ಇದನ್ನವನ ಗಮನಕ್ಕೆ ತಂದರು. ಹೊಸದನ್ನು ಮಾಡೋದರಲ್ಲಿ ಬಿಕಾನೇರಿ ಯಾವಾಗಲು ಎತ್ತಿದ ಕೈ. ಅದವನ ಯಶಸ್ಸಿನ ಗುಟ್ಟೂ ಹೌದು. ಈ ಪ್ರಾಚೀನ ಕಟ್ಟಡವನ್ನು ಕಂಡಾಗ, ಅವನ ಮಿದುಳಿನಲ್ಲಿ ಉದ್ಯಮವೊಂದು ಸುರುಳಿ ಬಿಚ್ಚತೊಡಗಿತು. ಆತ ಚಾಣಾಕ್ಷ. ಇದರ ವಿವರಗಳನ್ನೆಲ್ಲ ಕಲೆಹಾಕಿದ್ದಾನೆ. ಇಲ್ಲಿ ಯಾರ್‍ಯಾರಿದಾರೆ, ಇದಕ್ಕೆ ವಾರಸುದಾರರೆಷ್ಟು ಜನ, ಅವರ ಮನೋಭಾವ, ಚಟಗಳು, ದೌರ್ಬಲ್ಯಗಳು ಎಲ್ಲಾ ಚಿಕ್ಕಚಿಕ್ಕ ಸಂಗತಿಗಳನ್ನೂ ಒಟ್ಟುಮಾಡಿದಾನೆ. ವಂಶದ ಹೆಮ್ಮೆಯಂತೆ ಇದನ್ನು ನೀವೆಲ್ಲ ಪರಿಗಣಿಸುತ್ತಿರುವುದು ಗೊತ್ತಾಗಿದೆ. ನಿಮ್ಮ ಹತ್ತಿರ ಪ್ರಸ್ತಾಪ ತಂದರೆ ನೀವು ಚುರುಕಾಗಿಬಿಡುತ್ತೀರ. ಮರೆಯಲ್ಲಿ ಬೇರೆ ಕಾರ್ಯತಂತ್ರ ಹೆಣೆದ. ಅವನ ಜನ ಇಂತದನ್ನು ಅರಿವಿಗೇ ಬರದಂತೆ ಮಾಡತಾರೆ. ಮೊದಲು ನಿನ್ನ ದೊಡ್ಡಪ್ಪನಿಂದ ಹಣದ ಬೇಡಿಕೆಯಿಡುವಂತೆ ಮಾಡಿದ. ಈ ಸೌಧವನ್ನು ಕೆಡವಿ, ವಸ್ತುಗಳನ್ನೆಲ್ಲ ಮಾರಿ ಅಂತೆಲ್ಲ ಹೇಳಿದ್ದಕ್ಕೆ ನಿಮ್ಮೆಲ್ಲರ ಮನಸ್ಸು ಅಶಾಂತವಾಯಿತು. ಅದೇ ಅವನು ಬಯಸಿದ್ದು. ಆಮೇಲೆ ನಿಮ್ಮ ದೂರದ ಸಂಬಂಧಿ ಹುಡುಗಿ ಇಲ್ಲಿಗೆ ಬರುತ್ತಾಳೆ. ಹುಡುಗಿ ಸುಂದರಿ, ಮನೆಯವರಿಗೆ ಇಷ್ಟವಾಗತಾಳೆ. ಅವಳ ತಂದೆಯಾಗಲೆ ಪಾಸಿಟಿವ್ ಆಗಿ ನಿನ್ನ ಬಗ್ಗೆ ಹೇಳಿರತಾನೆ. ನೀನು ಸ್ಮಾರ್ಟಾಗಿರುವ ಎಲಿಜಿಬಲ್ ಬ್ಯಾಚುಲರ್, ಅವರು ಊಹಿಸಿದಂತೇ ನೀನವಳಿಗೆ ಇಷ್ಟವಾಗಿದೀಯ. ಆದರೆ ಅವಳಿಗೆ ಇಲ್ಲಿ ಬಂದಿರಲು ಸಾಧ್ಯವಿಲ್ಲ ಅಂತ ಅವರಿಗೆ ಗೊತ್ತಿತ್ತು. ನೀನೆ ಕೆಲಸ ಹಿಡಿದು, ಹೊರಗೆ ಹೋಗತೀಯ ಅಂತ ಅವರು ಊಹಿಸಿದ್ದರು. ನೀನು ದೂರವಾದರೆ ಇಲ್ಲಿಯ ಆಸ್ತಿಯನ್ನು ಮಾರುವುದಕ್ಕೆ ಬಲ ಬರುತ್ತಿತ್ತು. ಆಮೇಲೆ ಅವರಿಗೆ, ನಿನಗೆ ಧಾರಾವಾಹಿ ನಟಿಯ ಆಕರ್ಷಣೆಯಿರಬಹುದು ಅಂತ ಸಂದೇಹ ಬಂದಿದೆ. ಮತ್ತೊಂದೆಂದರೆ ಈ ಭವನವನ್ನು ದಿನಾ ಟೀವಿಯಲ್ಲಿ ನೋಡುತ್ತಿದ್ದಕ್ಕೆ ಜನರ ಮನಸಿನಲ್ಲಿ ಹಸಿರಾಗುಳಿತಾ ಬರತಿದೆ. ಮನದಿಂದ ಮಾಸಿದರೆ ಭವನಕ್ಕೇನಾದರು ಅಷ್ಟು ತಲೆಕೆಡಿಸಿಕೊಳ್ಳೋದಿಲ್ಲ. ನಿರ್ಮಾಪಕನೊಂದಿಗೊ, ನಿರ್ದೇಶಕನೊಂದಿಗೊ ಹಣ ಬಳಸಿ ಅಡ್ಜಸ್ಟ್ ಮಾಡಿ, ಚಿತ್ರೀಕರಣವನ್ನೆ ಎತ್ತಂಗಡಿ ಮಾಡಿಸಿ, ದೂರ ಹೋಗುವಂತೆ ಮಾಡಿದಾರೆ. ಆದರೆ ಅವಳು ಧಾರಾವಾಹಿ ಬಿಟ್ಟು, ಇಲ್ಲೆ ಟೀಚರಾಗಿದಾಳೇಂತ ಕೇಳಿದೆ. ನಿನ್ನ ತಂದೆಯಿಂದಲು ಈ ಭವನವನ್ನು ಕೆಡವಿಸೊ ಮಾತಾಡಿಸಿ ನಿಮ್ಮಲ್ಲಿ ಅಭದ್ರತೆಯ ಭಾವನೆಯನ್ನು ಹೆಚ್ಚಿಸಿದಾರೆ.' ತಡೆ ಅನ್ನುವಂತೆ ಕೈಯೆತ್ತಿದ ಆನಂದ. 'ಚುಕ್ಕಿ, ಇದನ್ನ ಕೆಡವಿದರೆ ಹೋಟೆಲು ಮಾಡೋ ಅವನ ಯೋಜನೆ ಹಾಳಾಗೋದಿಲ್ಲವೆ?' ಕೇಳಿದ. 'ಅವನ ವ್ಯೂಹಗಳೆ ಹಾಗೆ. ಭವನವೇ ನಾಶವಾಗೋ ಅತಿರೇಕದ ಕಲ್ಪನೆಯಲ್ಲಿ ನೀವೆಲ್ಲ ಹತಾಶರಾಗಿ, ಆಮೇಲೆ ಕೊನೇಪಕ್ಷ ಅದು ಭೂಮಿ ಮೇಲಾದರು ಉಳಿಯುತ್ತದಲ್ಲ ಅನ್ನುವ ಸಮಾಧಾನದಲ್ಲಿ ಮಾರಾಟ ಮಾಡುವ ಎರಡನೆ ಪ್ರಸ್ತಾಪಕ್ಕೆ ಒಪ್ಪುತ್ತೀರಿ ಅನ್ನುವುದು ಅವನ ಹಂಚಿಕೆ. ನೀವೆಲ್ಲಾ ಇದನ್ನು ಕೆಡವಲು ಒಪ್ಪಿದ್ದರು ಅವನು ಬಿಡುತ್ತಿದ್ದ ಅಂದುಕೊಂಡೆಯ!'